ಸಂಘಗಳ ಸಂಖ್ಯೆ				
ಉಳಿಕೆ	11	–	03	14

ಲೆಕ್ಕಪರಿಶೋಧನೆಯಾಗಿರುವ ರಾಜ್ಯ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳ ಪುನರ್ ಆಡಿಟ್ ನಡೆದಿರುವುದಿಲ್ಲ.

ಈ) ಪುನರ್ ಆಡಿಟ್ ಮಾಡಿದ ರಾಜ್ಯ ಮಟ್ಟದ ಕಾರ್ಯ ವ್ಯಾಪ್ತಿಯ ಸಹಕಾರ ಸಂಘಗಳಲ್ಲಿ ಯಾವ ಲೋಪ ದೋಷಗಳನ್ನುಕಂಡು ಹಿಡಿಯಲಾಗಿದೆ. ಹಾಗೂ ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ.

ಪುನರ್ ಆಡಿಟ್ ನಡೆಯದೇ ಇರುವುದರಿಂದ ಅನ್ವಯಿಸುವುದಿಲ್ಲ

ಉ) ಕಳೆದ 3 ವರ್ಷಗಳಿಂದ ವರ್ಷಾವಾರು ಅಡಿಟ್ ಮಾಡಿದ ರಾಜ್ಯ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳ ಪೈಕಿ ಪುನರ್ ಆಡಿಟ್ ಮಾಡಲಾದ ಸಹಕಾರ ಸಂಘಗಳಲ್ಲಿ ಮೂಲ ಆಡಿಟ್‌ನಲ್ಲಿಲ್ಲದ ಲೋಪದೋಷಗಳು ಕಂಡು ಬಂದಿದ್ದರೆ ಆಡಿಟ್ ಮಾಡಿದ ಅಧಿಕಾರಿಗಳ ಹಾಗೂ ಮೇಲ್ವಿಚಾರಣೆ ಮಾಡಿದ ಅಧಿಕಾರಿಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)

ಪುನರ್ ಆಡಿಟ್ ನಡೆಯದೇ ಇರುವುದರಿಂದ ಅನ್ವಯಿಸುವುದಿಲ್ಲ

ಸಂಖ್ಯೆ: ಸಿಓ 40 ಸಿಎಲ್‌ಎಂ 2009

ಸಹಿ/–
(ಲಕ್ಷ್ಮಣ ಸ. ಸವದಿ)
ಸಹಕಾರ ಸಚಿವರು.

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

408 ಶ್ರೀ ಬಚ್ಚೇಗೌಡ ಕೆ.ಪಿ
ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು

ಅ) ಘಟಪ್ರಭ ಸಹಕಾರ ಸಕ್ಕರೆ ಕಾರ್ಖಾನೆಯು ಸಕ್ಕರೆ ದಾಸ್ತಾನಿನ ಮೇಲೆ "ಕೀ ಲೋನ್" ಮತ್ತು ಇತರೆ ಸಾಲಗಳನ್ನು ಪಡೆದು ಕೊಂಡಿರುವ ಸಹಕಾರಿ ಬ್ಯಾಂಕುಗಳಾವುವು ಹಾಗೂ ಈ ಸಾಲಗಳನ್ನು ಸಮರ್ಪಕವಾಗಿ ಉಪಯೋಗಿಸಿಕೊಂಡು ಮರು ಪಾವತಿ ಮಾಡಲಾಗಿದೆಯೇ;

ಘಟಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಯು ಸಕ್ಕರೆ ದಾಸ್ತಾನಿನ ಆಧಾರದ ಮೇಲೆ ಬೆಳಗಾಂ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಿಂದ ಸಾಲ ಪಡೆದುಕೊಂಡಿರುತ್ತದೆ. ಈ ಸಾಲವನ್ನು ಸಮರ್ಪಕವಾಗಿ ಉಪಯೋಗಿಸಿಕೊಂಡಿದ್ದು,

ಕೆಲವು ಅನಿವಾರ್ಯ ಕಾರಣಗಳಿಂದ ಮರುಪಾವತಿ ಮಾಡುವಲ್ಲಿ ವಿಳಂಬವಾಗಿರುತ್ತದೆ.

ಆ) ಹಾಗಿಲ್ಲದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಕಾರ್ಖಾನೆಯ ಸಕ್ಕರೆ ದಾಸ್ತಾನು ಪರಿಶೀಲನೆಗೆ ಆದೇಶಿಸಲಾಗಿರುತ್ತದೆ ಮತ್ತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64ರಡಿ ವಿಚಾರಣೆಗೆ ಆದೇಶಿಸಲಾಗಿದ್ದು, ವಿಚಾರಣೆ ಪ್ರಗತಿಯಲ್ಲಿರುತ್ತದೆ.

ಇ) ಘಟಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆ ಕಳೆದ ಮೂರು ವರ್ಷಗಳಿಂದ ಘಟಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆ ಲಾಭದಲ್ಲಿದೆಯೇ; ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು;

ಘಟಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಯು ಕಳೆದ ಮೂರು ವರ್ಷಗಳಿಂದ ಲಾಭದಲ್ಲಿರುತ್ತದೆ.

ಈ) ಈ ಸಕ್ಕರೆ ಕಾರ್ಖಾನೆಯಲ್ಲಿ ಸಕ್ಕರೆ ದಾಸ್ತಾನು ಇಲ್ಲದಿರುವ ಬಗ್ಗೆ ಹಾಗೂ ಇತರೆ ಆರೋಪಗಳ ಮೇಲೆ ಸಹಕಾರಿ ಕಾಯ್ದೆ ಕಲಂ 64ರ ರೀತ್ಯ 2008ನೇ ಸಾಲಿನಲ್ಲಿ ವಿಚಾರಣೆಗೆ ಆದೇಶಿಸಲಾಗಿದೆಯೇ;

ಹೌದು.

Yes.

ಉ) ಹಾಗಿದ್ದಲ್ಲಿ, ಮಾಡಲಾಗಿರುವ ಆರೋಪಗಳೆಷ್ಟು ಹಾಗೂ ಅವುಗಳು ಯಾವುವು (ವಿವರ ನೀಡುವುದು);

ಆರೋಪಗಳ ಸಂಖ್ಯೆ 11. ವಿವರಗಳನ್ನು **ಅನುಬಂಧ–1**ರಲ್ಲಿ ನೀಡಲಾಗಿದೆ.

11 Charges have been framed. The said charges are as given in **Annexure-1.**

ಊ) ಕಲಂ 64ರ ವಿಚಾರಣೆ ಪ್ರಾರಂಭಿಸಲಾಗಿದೆಯೇ; ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು; ಜವಾಬ್ದಾರರಾರು; ತೆಗೆದುಕೊಂಡಿರುವ ಕ್ರಮಗಳೇನು;

ಹೌದು.

Yes.

ಋ) ಘಟಪ್ರಭ ಸಹಕಾರ ಸಕ್ಕರೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರನ್ನು ಅಮಾನತ್ತು ಗೊಳಿಸಲಾಗಿತ್ತೆ; ಹಾಗಿದ್ದಲ್ಲಿ, ಅವರ ಮೇಲೆ ಹೊರಿಸಲಾಗಿರುವ ಆರೋಪಗಳೇನು (ವಿವರ ನೀಡುವುದು)?

ಆದೇಶ ಸಂಖ್ಯೆ ಸಣ 206 ಎಸಸೇ 2008 ದಿನಾಂಕ 16.06.2008 ರನ್ವಯ ಕಾರ್ಖಾನೆಯ ಅಂದಿನ ವ್ಯವಸ್ಥಾಪಕ ನಿರ್ದೇಶಕರನ್ನು ಅಮಾನತ್ತಿನಲ್ಲಿ ಇರಿಸಲಾಗಿತ್ತು. ಅವರ ಮೇಲಿನ ಆರೋಪಗಳ ವಿವರಗಳನ್ನು **ಅನುಬಂಧ–2**ರಲ್ಲಿ ನೀಡಲಾಗಿದೆ.

The then, Managing Director of the Ghataprabha SSKN., has been placed under suspension vide G.O.No. ಸಇ 206 ಎಸಸೇ 2008, dated 16.6.2008. allegations have been given in **Annexure-2.**

ವಾಕ್ಯೆ 17 ಸಸಕಾ 2009

(ಶಿವರಾಜ್ ಎಸ್.ತಂಗಡಗಿ)
ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು

ಅನುಬಂಧ–1

ಕಲಂ 64ರಡಿ ವಿಚಾರಣೆಗಾಗಿ ಮಾಡಿರುವ ಆರೋಪಗಳು

ಆರೋಪ – 1

ಕಾರ್ಖಾನೆ 3 ಬ್ಯಾಂಕುಗಳಿಂದ ಅಂದರೆ (1) ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಬೆಳಗಾವಿ ರವರಿಂದ ರೂ.3355.98 ಲಕ್ಷಗಳು (2) ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬೆಳಗಾಂ ಶಾಖೆ ರವರಿಂದ ರೂ.1000.00 ಲಕ್ಷಗಳು ಮತ್ತು (3) ಕೆನರಾ ಬ್ಯಾಂಕ್, ಬೆಳಗಾವಿ ಶಾಖೆ ರವರಿಂದ ರೂ.699.57 ಲಕ್ಷಗಳು ಸಕ್ಕರೆ ದಾಸ್ತಾನನ್ನು ಅಡವು ಮಾಡಿ ಸಾಲ ಪಡೆದುಕೊಂಡಿದ್ದು, ಈ ಸಾಲಕ್ಕೆ ಆಧಾರವಾಗಿ ಕಾರ್ಖಾನೆಯು ತಕ್ಕ ಪ್ರಮಾಣದಲ್ಲಿ ಸಕ್ಕರೆ ದಾಸ್ತಾನು ಅಡವು ಮಾಡಲಾಗಿರುವ ಬಗ್ಗೆ ದಾಸ್ತಾನು ತನಿಖಾ ತಂಡ ದಾಸ್ತಾನು ಪರಿಶೀಲನೆ ಮಾಡಲು ಕಾರ್ಖಾನೆಗೆ ಭೇಟಿ ನೀಡಿದ್ದು ಈ ಬಗ್ಗೆ ದಾಸ್ತಾನು ಪರಿಶೀಲನೆಗೆ ಕಾರ್ಖಾನೆ ವ್ಯವಸ್ಥೆ ಮಾಡದ ಕಾರಣ ಸಾಲ ನೀಡಿದ ಮೊತ್ತದಷ್ಟು ದಾಸ್ತಾನು ಇರುವ ಬಗ್ಗೆ ದೃಢೀಕರಿಸಲು ಸಾಧ್ಯವಾಗಲಿಲ್ಲವೆಂದು ತಿಳಿಸಿರುವ ಕಾರಣ ಸದರಿ ತಂಡದಿಂದ ದಾಸ್ತಾನು ಪರಿಶೀಲನೆಗೆ ವ್ಯವಸ್ಥೆ ಮಾಡಿ ವಸ್ತು-ಸ್ಥಿತಿ ಕುರಿತಂತೆ ವಿಚಾರಣಾಧಿಕಾರಿಗಳು ವಿಚಾರಣೆ ವರದಿಯಲ್ಲಿ ವರದಿಸುವುದು ಮತ್ತು ದಾಸ್ತಾನು ಕೊರತೆ ಕಂಡು ಬಂದಲ್ಲಿ ಇದಕ್ಕೆ ಹಣಕಾಸು ಸಂಸ್ಥೆಗಳ ಮತ್ತು ಕಾರ್ಖಾನೆ ಹೊಣೆಗಾರಿಕೆ ಕುರಿತಂತೆ ವಿಚಾರಣೆ ನಡೆಸಿ ಸಂಬಂಧಪಟ್ಟವರ ಮೇಲೆ ಜವಾಬ್ದಾರಿ ನಿಗದಿಪಡಿಸುವುದು.

ಆರೋಪ – 2

ಕಾರ್ಖಾನೆಯ ಕಾರ್ಮಿಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಕಳೆದ 3 ತಿಂಗಳ ವೇತನ ಪಾವತಿಸಿದೆ ರೂ.138.00 ಲಕ್ಷ ಬಾಕಿ ಉಳಿಸಿಕೊಂಡಿರುವ ಬಗ್ಗೆ.

ಆರೋಪ – 3

ಕಾರ್ಖಾನೆಯ ಸಿಬ್ಬಂದಿ ವರ್ಗದ ವೇತನದಿಂದ ಕಟಾಯಿಸಲಾದ ಸಾಮಾನ್ಯ ಭವಿಷ್ಯ ನಿಧಿ ವಂತಿಗೆಗಳನ್ನು ನಿಗದಿತ ಕಾಲಾವಧಿಯ ಒಳಗೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಪಾವತಿ ಮಾಡದೇ ಇದ್ದುದರಿಂದ ಭವಿಷ್ಯ ನಿಧಿ

ಇಲಾಖೆ ದಂಡ ವಿಧಿಸಿದ್ದು ಕಾರ್ಖಾನೆಯು ರೂ.24.28 ಲಕ್ಷ ದಂಡ ಪಾವತಿಸಿ ಕಾರ್ಖಾನೆಗೆ ನಷ್ಟ ಉಂಟು ಮಾಡಿರುವುದು.

ಆರೋಪ – 4

ಕಾರ್ಖಾನೆ ಪಾವತಿಸಬೇಕಾಗಿರುವ ಶಾಸನಬದ್ದ ಮೊತ್ತಗಳಾದ ಅಬಕಾರಿ ಸುಂಕ, ಕಬ್ಬು ಖರೀದಿ ತೆರಿಗೆ ಪಾವತಿಸಲು ವಿಫಲರಾಗಿರುವ ಬಗ್ಗೆ.

ಆರೋಪ – 5

ಕಬ್ಬು ಬೆಳೆಗಾರರಿಗೆ ಸಕ್ಕರೆ (ನಿಯಂತ್ರಣ) ಕಾಯ್ದೆ 1966 ಅನ್ವಯ ಕಬ್ಬು ಸರಬರಾಜು ಮಾಡಿದ ರೈತರಿಗೆ ಕಬ್ಬು ಬಿಲ್ಲು ಬಾಕಿ ಮೊತ್ತವನ್ನು ಕಬ್ಬು ಸರಬರಾಜು ಮಾಡಿದ ದಿನಾಂಕದಿಂದ 14 ದಿನಗಳೊಳಗಾಗಿ ಪಾವತಿ ಮಾಡಬೇಕಾಗಿದ್ದರೂ ಸಹ ನಿಗದಿತ ಅವಧಿಯಲ್ಲಿ ಕಬ್ಬು ಬಿಲ್ಲು ಬಾಕಿಯನ್ನು ಪಾವತಿಸಲು ವಿಫಲರಾಗಿ ದಿನಾಂಕ 31.3.2008ರ ಅಂತ್ಯಕ್ಕೆ ರೂ.2171.54 ಲಕ್ಷ ಬಾಕಿ ಉಳಿಸಿ ರೈತರನ್ನು ಸಂಕಷ್ಟಕ್ಕೆ ಸಿಲುಗಿಸಿ ಕಾರ್ಖಾನೆಯನ್ನು ಈ ಹಂತಕ್ಕೆ ತರಲು ಕಾರಣರಾದವರನ್ನು ಗುರುತಿಸಿ ಜವಾಬ್ದಾರಿ ನಿಗದಿಪಡಿಸುವ ಬಗ್ಗೆ.

ಆರೋಪ – 6

ಕಾರ್ಖಾನೆಯು ಈಗಾಗಲೇ 3 ಹಣಕಾಸು ಸಂಸ್ಥೆಗಳಿಂದ ಒಟ್ಟು ರೂ.5055.50 ಲಕ್ಷ ಸಕ್ಕರೆ ದಾಸ್ತಾನು ಅಡವು ಸಾಲ ಪಡೆದಿದ್ದರೂ ಸಹ ಪುನಃ ಎನ್‌ಸಿಡಿಸಿ ಯಿಂದ ರೂ.2700.00 ಲಕ್ಷಗಳ ನೆರವನ್ನು ಸರ್ಕಾರದ ಗಮನಕ್ಕೆ ತಾರದೆ ಪಡೆಯುವ ಅವಶ್ಯಕತೆ ಕುರಿತಂತೆ

ಆರೋಪ – 7

2002–03ನೇ ಸಾಲಿನಿಂದ 2007–08ನೇ ಸಾಲಿನ ಅಂತ್ಯದವರೆಗೆ ಕಬ್ಬು ಕಟಾವು ಹಾಗೂ ಸಾರಿಗೆ ಮುಕ್ತದಾರರುಗಳಿಗೆ ಮುಂಗಡ ಹಣ ನೀಡಿದ್ದು ಈ ಪೈಕಿ ಹೆಚ್ಚಿನ ಮೊತ್ತ ಹೊಂದಾಣಿಕೆಯಾಗದೆ ಅಥವಾ ವಸೂಲಾಗದೆ ಬಾಕಿ ಉಳಿಸಿಕೊಂಡಿದ್ದು ವಸೂಲಾತಿ ಕ್ರಮ ಜರುಗಿಸುವಲ್ಲಿ ಕಾರ್ಖಾನೆ ವಿಫಲವಾಗಿರುವ ಬಗ್ಗೆ ಮತ್ತು ಇದಕ್ಕೆ ಕಾರಣರಾದವರ ಬಗ್ಗೆ ಜವಾಬ್ದಾರಿ ಗೊತ್ತುಪಡಿಸುವುದು.

ಆರೋಪ – 8

2002–03ನೇ ಸಾಲಿನಿಂದ ಕಾರ್ಖಾನೆ ಉತ್ಪಾದಿಸಿದ ಸಕ್ಕರೆ ಪ್ರಮಾಣ ಹಾಗೂ ಇಳುವರಿ ಕಾರ್ಖಾನೆಯ ಸಾಮರ್ಥ್ಯಕ್ಕೆ ಹೋಲಿಸಿದಂತೆ ತೃಪ್ತಿಕರವಾಗಿರುವ ಬಗ್ಗೆ, ಸಕ್ಕರೆ ಮೊಲಾಸೆಸ್ ಮತ್ತು ಬಗಾಸ್ ಮಾರಾಟದಲ್ಲಿ, ಬಿಡಿ–ಭಾಗಗಳ ಮತ್ತು ಯಂತ್ರೋಪಕರಣಗಳ ಖರೀದಿಯಲ್ಲಿ ಪಾರದರ್ಶಕತೆ ಹಾಗೂ ನಿಯಮಗಳನ್ನು ಅನುಸರಿಸಿರುವ ಬಗ್ಗೆ.

ಆರೋಪ – 9

ದಾಸ್ತಾನು ತನಿಖಾ ತಂಡದ ವರದಿಯಲ್ಲಿ ವಿವರಿಸಿರುವಂತೆ ದಿನಾಂಕ 31.3.2008ರ ಅಂತ್ಯಕ್ಕೆ ಸಕ್ಕರೆ ರೂ.23.56 ಕೋಟಿ ಮತ್ತು ಮೊಲಾಸೆಸ್ ರೂ.1.14 ಕೋಟಿ ಒಟ್ಟು ಮೊತ್ತ ರೂ.24.70 ಕೋಟಿಗಳಷ್ಟು ಸಾಲದ ರೂಪದಲ್ಲಿ ಮಾರಾಟ ಮಾಡಿ ಬಾಕಿ ಉಳಿಸಿಕೊಂಡಿದ್ದು ಕಾರ್ಖಾನೆಯ ಉಪ ನಿಬಂಧನೆಗಳಲ್ಲಿ ಅವಕಾಶವಿರುವ ಬಗ್ಗೆ, ಇದರಿಂದ ಕಾರ್ಖಾನೆಗೆ ನಷ್ಟ ಉಂಟಾಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಜವಾಬ್ದಾರಿ ಗೊತ್ತುಪಡಿಸುವುದು.

ಆರೋಪ – 10

. 2002–03 ರಿಂದ 2007–08ನೇ ಸಾಲಿನ ಅವಧಿಯಲ್ಲಿ ಕೇಂದ್ರ ಸರ್ಕಾರ ಸಕ್ಕರೆ ಮಾರಾಟ ಮಾಡಲು ಪರವಾನಗಿ ನೀಡಿದ ಪ್ರಮಾಣದಷ್ಟು ಸಕ್ಕರೆ ಮಾರಾಟ ಮಾಡಲಾಗಿರುವ ಬಗ್ಗೆ ಮತ್ತು ಪರವಾನಗಿ ಇಲ್ಲದೆ ಮಾರಾಟ ಮಾಡಿದ್ದಲ್ಲಿ ಯಾವ ಕಾರಣಕ್ಕಾಗಿ ಮಾರಾಟ ಮಾಡಲಾಗಿದೆ ಇದರಿಂದ ಕಾರ್ಖಾನೆಗೆ ನಷ್ಟ ಉಂಟಾಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಜವಾಬ್ದಾರಿ ಗೊತ್ತುಪಡಿಸುವುದು.

ಆರೋಪ – 11

ಕಾರ್ಖಾನೆ ಹೊಂದಿರುವ ಬ್ಯಾಂಕ್ ಖಾತೆಗಳಲ್ಲಿ ಶುಲ್ಕ ಇಲ್ಲದೆ ಚೆಕ್ ನೀಡಲಾಗಿದೆಯೇ? ಕಾರ್ಖಾನೆ ಕಳೆದ ಎರಡು ವರ್ಷಗಳಿಂದ ಬ್ಯಾಂಕ್ ವ್ಯವಹಾರ ತೃಪ್ತಿಕರವಾಗಿರುವ ಬಗ್ಗೆ.

<u>ಅನುಬಂಧ – 2</u>

ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯ ಅಂದಿನ ವ್ಯವಸ್ಥಾಪಕ ನಿರ್ದೇಶಕರ ಅಮಾನತ್ತಿನ ಆದೇಶದಲ್ಲಿ ಮೇಲುನೋಟಕ್ಕೆ ಕಂಡು ಬಂದ ಆರೋಪಗಳು

ಆರೋಪ – 1 :–

ಕಾರ್ಖಾನೆ 3 ವಾಣಿಜ್ಯ ಬ್ಯಾಂಕುಗಳಿಂದ ಸಕ್ಕರೆ ದಾಸ್ತಾನನ್ನು ಅಡವು ಮಾಡಿ ರೂ.5055.50 ಲಕ್ಷ ಸಾಲ ಪಡೆದುಕೊಂಡಿದ್ದು, ಈ ಸಾಲಕ್ಕೆ ಆಧಾರವಾಗಿ ಕಾರ್ಖಾನೆಯು ತಕ್ಕ ಪ್ರಮಾಣದಷ್ಟು ಸಕ್ಕರೆ ದಾಸ್ತಾನನ್ನು ಅಡವು ಮಾಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಮಿತಿಯು ಕಾರ್ಖಾನೆಯ ದಾಸ್ತಾನನ್ನು ಪರಿಶೀಲಿಸಲು ಹಾಗೂ ಹಣಕಾಸು ಸಂಸ್ಥೆಗಳೊಂದಿಗೆ ಸಭೆ ನಡೆಸಲು ಬಯಸಿದ್ದು, ಕಾರ್ಖಾನೆಯ ಸಮಿತಿ ಸದಸ್ಯರಿಗೆ ಸಕ್ಕರೆ ದಾಸ್ತಾನನ್ನು ಪರಿಶೀಲಿಸಲು ವ್ಯವಸ್ಥಿಸಲಿಲ್ಲವಾದ ಕಾರಣ ದಾಸ್ತಾನು ಪರಿಶೀಲಿಸಲು ಸಾಧ್ಯವಾಗಿಲ್ಲವೆಂದು ವರದಿ ಮಾಡಲಾಗಿದೆ. ಶ್ರೀ ಮಧುಸೂಧನ್ ರವರು ಕಾರ್ಖಾನೆಯ ಜವಾಬ್ದಾರಿಯುತ ಸರ್ಕಾರಿ ಅಧಿಕಾರಿಗಳಾಗಿದ್ದು, ಉನ್ನತ ಮಟ್ಟದ ಸಮಿತಿಗೆ ಕಾರ್ಖಾನೆ ಸಾಲಕ್ಕೆ ಆಧಾರವಾಗಿ ಅಡವು ಮಾಡಿದ ಸಕ್ಕರೆ ದಾಸ್ತಾನಿನ ಸಂಪೂರ್ಣ ಮಾಹಿತಿ ನೀಡಿ ಸಕ್ಕರೆ ದಾಸ್ತಾನನ್ನು ಪರಿಶೀಲಿಸಲು ಅವಶ್ಯಕ ವ್ಯವಸ್ಥೆ ಕಲ್ಪಿಸುವುದು ಕಾರ್ಖಾನೆಯ

ವ್ಯವಸ್ಥಾಪಕ ನಿರ್ದೇಶಕರ ಹೊಣೆಗಾರಿಕೆಯಾಗಿದೆ. ಆದರೆ ಅವರು ತಮ್ಮ ಹೊಣೆಗಾರಿಕೆ ನಿರ್ವಹಿಸಿರುವುದಿಲ್ಲ.

ಆರೋಪ – 2 :–

ಅಧಿಕಾರಿಗಳ ಸಮಿತಿಯ ವರದಿಯಂತೆ ಕಾರ್ಖಾನೆಯ ಕಾರ್ಮಿಕರು ಹಾಗೂ ಸಿಬ್ಬಂದಿ ವರ್ಗದ 3 ತಿಂಗಳ ವೇತನ ಪಾವತಿಸದೆ ರೂ.138.00 ಲಕ್ಷ ಬಾಕಿ ಉಳಿಸಿಕೊಳ್ಳಲಾಗಿರುವುದು ಕಂಡು ಬಂದಿದೆ. ಶ್ರೀ ಮಧುಸೂಧನ್ ರವರು ಕಾರ್ಖಾನೆಯ ಕಾರ್ಮಿಕರು ಹಾಗೂ ಸಿಬ್ಬಂದಿ ವರ್ಗದ 3 ತಿಂಗಳ ವೇತನ ಪಾವತಿ ಮಾಡದೆ ಬಾಕಿ ಉಳಿಸಿಕೊಂಡು ಗಂಭೀರ ಸ್ವರೂಪದ ಕರ್ತವ್ಯ ಲೋಪವೆಸಗಿರುತ್ತಾರೆ.

ಆರೋಪ – 3 :–

ಕಾರ್ಖಾನೆಯ ಸಿಬ್ಬಂದಿ ವರ್ಗದ ವೇತನದಿಂದ ಕಟಾಯಿಸಲಾದ ಸಾಮಾನ್ಯ ಭವಿಷ್ಯ ನಿಧಿ ವಂತಿಗೆಗಳನ್ನು ನಿಗಧಿತ ಕಾಲಾವಧಿಯ ಒಳಗೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಪಾವತಿ ಮಾಡುವುದು ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರ ಶಾಸನಬದ್ಧ ಹೊಣೆಗಾರಿಕೆಯಾಗಿದ್ದರೂ ಸಹ ಅವರು ಸಿಬ್ಬಂದಿ ವೇತನದಿಂದ ಕಟಾಯಿಸಲಾದ ಭವಿಷ್ಯ ನಿಧಿ ವಂತಿಗೆಗಳನ್ನು ಸಕಾಲದಲ್ಲಿ ಪಾವತಿಸದೆ ಇದ್ದುದ್ದಕ್ಕಾಗಿ ಭವಿಷ್ಯ ನಿಧಿ ಇಲಾಖೆ ದಂಡ ವಿಧಿಸಿದ್ದು, ಕಾರ್ಖಾನೆಯು ರೂ.24.28 ಲಕ್ಷ ದಂಡ ಪಾವತಿಸಿದೆ ಎಂದು ವರದಿ ಮಾಡಲಾಗಿದೆ. ಕಾರ್ಖಾನೆಯ ಸಿಬ್ಬಂದಿ ವರ್ಗದ ವೇತನದಿಂದ ಕಟಾಯಿಸಿದ ಭವಿಷ್ಯ ನಿಧಿ ವಂತಿಗೆಗಳನ್ನು ನಿಗಧಿತ ಕಾಲಾವಧಿಯೊಳಗೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಪಾವತಿಸಿರುವುದಿಲ್ಲ.

ಆರೋಪ – 4 :–

ಕಾರ್ಖಾನೆ ಪಾವತಿಸಬೇಕಾಗಿರುವ ಶಾಸನಬದ್ಧ ಮೊತ್ತಗಳಾದ ಅಬಕಾರಿ ಸುಂಕ, ಕಬ್ಬು ಖರೀದಿ ತೆರಿಗೆ ಮೊತ್ತಗಳನ್ನು ಪಾವತಿ ಮಾಡಲಾಗಿಲ್ಲ. ದಿನಾಂಕ 7.6.2008ಕ್ಕೆ ರೂ.150.51 ಲಕ್ಷ ಅಬಕಾರಿ ಶುಲ್ಕ ಹಾಗೂ ರೂ.197.58 ಲಕ್ಷ ಕಬ್ಬು ಖರೀದಿ ತೆರಿಗೆ ಪಾವತಿಯಾಗದೆ ಉಳಿದಿದೆ ಎಂದು ವರದಿ ಮಾಡಲಾಗಿದೆ.

ಆರೋಪ – 5 :–

ಕಬ್ಬು ಬೆಳೆಗಾರರಿಗೆ ಸಕ್ಕರೆ ನಿಯಂತ್ರಣ ಕಾಯ್ದೆಯನ್ವಯ ಕಬ್ಬು ಸರಬರಾಜು ಮಾಡಿದ ಹಣವನ್ನು 14 ದಿನದೊಳಗೆ ಪಾವತಿ ಮಾಡಬೇಕಾಗಿದೆಯಾದರೂ 2007–08ನೇ ಹಂಗಾಮಿನ ಬಾಬ್ತು ರೂ.2099.59 ಲಕ್ಷ ಕಬ್ಬಿನ ಬಿಲ್ಲು ಪಾವತಿಸದೇ ಬಾಕಿ ಉಳಿಸಿಕೊಳ್ಳಲಾಗಿದೆ.

ಆರೋಪ – 6 :-

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 29(ಜಿ) ರ ಪ್ರಕಾರ ಶ್ರೀ ಆರ್.ವಿ.ಮಧುಸೂಧನ್, ವ್ಯವಸ್ಥಾಪಕ ನಿರ್ದೇಶಕರು, ಘಟಪ್ರಭ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಗೋಕಾಕ್, ಬೆಳಗಾಂ ಜಿಲ್ಲೆ ರವರು ಕರ್ತವ್ಯಗಳನ್ನು ನಿರ್ವಹಣೆ ಮಾಡಿರುವುದಿಲ್ಲ ಹಾಗೂ ವರದಿ ಮಾಡಿರುವ ಲೋಪದೋಷಗಳಿಗೆ ನೇರವಾಗಿ ಹೊಣೆಗಾರರಾಗಿರುತ್ತಾರೆ. ಮುಖ್ಯವಾಗಿ ಅಂದಾಜು ರೂ.5055.50 ಲಕ್ಷದ ಮೊತ್ತಕ್ಕೆ ವಿವಿಧ ಬ್ಯಾಂಕುಗಳಲ್ಲಿ ಅಡಮಾನ ಮಾಡಿದ ಸಕ್ಕರೆ ದಾಸ್ತಾನು ಇರುವ ಬಗ್ಗೆ ತೀವ್ರ ಸಂಶಯ ಉಂಟಾಗಿದೆ.

ಕರ್ನಾಟಕ ವಿಧಾನ ಸಭೆ

409

ಶ್ರೀ ಕರಡಿ ಸಂಗಣ್ಣ ಅಮರಪ್ಪ

ಅ) ಬೆಳಗಾಂ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿಯಮಿತದವರು ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಸಹಕಾರಿ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳಿಗೆ ನೀಡಿರುವ ಸಾಲವೆಷ್ಟು? (ಪೂರ್ಣ ಮಾಹಿತಿ ನೀಡುವುದು) ಹಾಗೂ ಬ್ಯಾಂಕಿನ ಪದಾಧಿಕಾರಿಗಳ ಸಂಬಂಧಿಕರು ಆಡಳಿತ ಮಂಡಳಿಯಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಸಾಲ ಕೊಡಲಾಗಿದೆಯೇ? ಹಾಗಿದ್ದಲ್ಲಿ ಸಾಲ ಮಂಜುರಾತಿ ನಿಯಮಗಳನ್ನು ಪಾಲಿಸಲಾಗಿದೆಯೇ?

ಕಳೆದ ಮೂರು ವರ್ಷ ಅವಧಿಯಲ್ಲಿ ಈ ಕೆಳಗಿನ ಸಹಕಾರಿ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳಿಗೆ ಬ್ಯಾಂಕು ನೀಡಿರುವ ಸಾಲದ ವಿವರ:-

ಕ್ರ. ಸಂ.	ಕಾರ್ಖಾನೆ ಹೆಸರು	ಉದ್ದೇಶ	2005–06 (ರೂ.ಲಕ್ಷ ಗಳಲ್ಲಿ)	2006–07 (ರೂ.ಲಕ್ಷ ಗಳಲ್ಲಿ)	2007–08 (ರೂ.ಲಕ್ಷ ಗಳಲ್ಲಿ)
1	ಶ್ರೀ ಸೋಮೇಶ್ವರ ಸ.ಸ.ಕಾರ್ಖಾನೆ ನಿ, ಶಿದ್ದ ಸಮುದ್ರ	1.ದುಡಿಯುವ ಬಂಡವಾಳ 2.ಕ್ಲೀನ್ ಸಿಸಿ 3.ಅವಧಿ ಸಾಲ	– – 0.68	2000.00 115.00 300.00	3500.00 – –
2	ಶ್ರೀ ಹಿರಣ್ಯಕೇಶಿ ಸ.ಸ. ಕಾರ್ಖಾನೆ ನಿ, ಸಂಕೇಶ್ವರ	1.ದುಡಿಯುವ ಬಂಡವಾಳ 2.ಅವಧಿ	2600.00 –	2683.00 615.70	2752.00 –